ಸಿ. ಅನಂತರಾವ್ ಹಿರೇಹಳ್ಳಿ, ಭರಮಸಾಗರ

*ವೃತ್ತಿಯಲ್ಲಿರುವವರು ನ್ಯೂಸ್‌ಪೇಪರ್ ಓದುವುದಕ್ಕೂ, ನಿವೃತ್ತರಾದವರು ನ್ಯೂಸ್ ಪೇಪರ್ ಓದುವುದಕ್ಕೂ ಏನು ವ್ಯತ್ಯಾಸ?*



ಅವರು ಓದೋದು ಪಟಪಟ; ಇವರು ಓದೋದು ಪುಟಪುಟ!

ಪಟ್ಟಾಂಗದ ಪಟ್ಟಾಭಿ, ಬೆಂಗಳೂರು

*ಕಪ್ಪುಹಣ ಉಳ್ಳವರು ಕಡುದೈವಭಕ್ತರು ಎಂಬ ಮಾತೊಂದು ಪ್ರಚಲಿತದಲ್ಲಿದೆ. ನೀವೂ ಈ ಮಾತನ್ನು ಒಪ್ಪುವಿರಾ?*

ನಾನೇನು, ಆ ತಿಮ್ಮಪ್ಪನೂ ಒಪ್ಪುತ್ತಾನೆ. ಕಡುದೈವಭಕ್ತರ ಕಪ್ಪುಹಣದ ಕಾಣಿಕೆಯ ರಾಶಿಗೆ ಸಿಲುಕಿ ಬೆಳ್ಳಗಿದ್ದ ತಿಮ್ಮಪ್ಪನೇ ಕಪ್ಪಾಗಿಹೋದ!

ಕುಬೇರಪ್ಪ ಎಂ. ವಿಭೂತಿ, ಹರಿಹರ

*ಇಲ್ಲೊಬ್ಬಳು ನನಸಾಗಿ ಬಾರದೆ ಕನಸಾಗಿ ಬಂದು ಕಾಡುವುದರ ಮರ್ಮವೇನು?*

ನೀವು ಕನಸಿನಲ್ಲಿ ಮಾತ್ರ ಕುಬೇರರು, ಈಚೆ ಹರಿ, ಹರ ಎನ್ನುತ್ತಾ ವಿಭೂತಿ ಧರಿಸಿ ಅಡ್ಡಾಡುವವರು ಎಂದು ಅವಳಿಗೆ ತಿಳಿದಿದೆ!

ಪಿ.ಜೆ. ರಾಘವೇಂದ್ರ, ಮೈಸೂರು

*ತೆಂಗಿನಕಾಯಿಯ ಬದಲು ನುಗ್ಗೇಕಾಯಿ ಪಡೆದಿದ್ದರೆ ಕೆಜೆಪಿ ಗೆಲ್ಲುತ್ತಿತ್ತೇ?*




ಹಾಗಲಕಾಯಿ ಅದರ ಅಧ್ಯಕ್ಷ ಆಗಿರುವವರೆಗೆ ಸಾಧ್ಯವಿಲ್ಲ!

ಆರ್. ನಾಗರಾಜ್, ಗೊರೂರು

*ಮೋರಿಯಿಂದ ಮೋರಿಗೆ ಹಾರುವ ಕಪ್ಪೆಗೂ, ಪಕ್ಷದಿಂದ ಪಕ್ಷಕ್ಕೆ ಜಿಗಿಯುವ ರಾಜಕಾರಣಿಗಳಿಗೂ ವ್ಯತ್ಯಾಸವಿದೆಯಾ?*

ಕಪ್ಪೆಯದು ಶೀತಲ ರಕ್ತ (ಕೋಲ್ಡ್ ಬ್ಲಡೆಡ್); ರಾಜಕಾರಣಿಯದು ಶೀತಲ ಬುದ್ಧಿ, ಶೀತಲ ಹೃದಯ, ಶೀತಲ ಮನಸ್ಸು.

ವಿ. ಹಮೀದ್, ವಿಟ್ಲ

*ಹುಡುಗನಿಗೆ ಮೀಸೆ ಬಂದರೆ ಅದು ಪುರುಷಲಕ್ಷಣ. ಹುಡುಗಿಗೆ ಮೀಸೆ ಬಂದರೆ...?*

ಥ್ರೆಡಿಂಗ್, ವ್ಯಾಕ್ಸಿಂಗ್‌ನವರಿಗೆ ಶುಭಲಕ್ಷಣ.

ಎಸ್.ಎ. ಮೋಹನರಾಜು, ಶಿವಮೊಗ್ಗ

*ಪಿತೃವ್ಯಾಮೋಹಕ್ಕೂ, ಪಿತ್ರಾರ್ಜಿತ ಆಸ್ತಿಯ ವ್ಯಾಮೋಹಕ್ಕೂ ನಡುವಿನ ವ್ಯತ್ಯಾಸವೇನು ರಾಮ್‌ಜೀ?*

ಪಿತೃ ಬರೆದ ವಿಲ್! ಅದು ಸರಿಯಿದ್ದರೆ ಪಿತೃವ್ಯಾಮೋಹ, ಇಲ್ಲವಾದರೆ ಕೋರ್ಟಿನ ಕಟಕಟೆಯಲ್ಲಿ ಪಿತ್ರಾರ್ಜಿತ ವ್ಯಾಮೋಹ!

ಬಿ.ಆರ್. ರಂಜನ್ ಕುಮಾರ್, ಕಳಸ

*ಮದುವೆಗೂ ಮುಂಚೆ ಹುಟ್ಟಿದ ಮಗುವಿನ ಆಧಾರ್ ಕಾರ್ಡ್‌ಗೆ ಯಾರ ಅಪ್ಪನ ಹೆಸರು ಕೊಡಲಿ ಗುರು?*

ತಾಯಿಯ ಹೆಸರೇ ಕೊಡಿ. ತಲೆ ತಪ್ಪಿಸಿಕೊಂಡ ಅಪ್ಪನಿಗಿಂತ ತಲೆ ಕಾಯ್ದು ಜನ್ಮವಿತ್ತ ಅಮ್ಮನೇ ಅಪ್ಪ!

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

*ಪ್ರಪಂಚದ ಅತಿ ದೊಡ್ಡ ಶ್ರೀಮಂತ ಗೊತ್ತು; ಅತಿ ದೊಡ್ಡ ಬಡವ ಯಾರು?*

ಕನಿಷ್ಠ ಒಬ್ಬನಾದರೂ ಸ್ನೇಹಿತ ಇಲ್ಲದವನು!

ಜಾ.ರು. ಆದಿನಾರಾಯಣಮುನಿ, ಬೆಂಗಳೂರು

*ಕೇವಲ 5 ಜನ ಪಾಂಡವರಿಗೆ 100 ಜನ ಕೌರವರು ಹೆದರಿಕೊಂಡರೇಕೆ?*

ಮುಷ್ಟಿ ಒಂದೇ ಇದ್ದರೂ 32 ಹಲ್ಲುಗಳನ್ನೂ ಉದುರಿಸಬಹುದು ಎಂಬ ಸತ್ಯ ಅವರಿಗೆ ತಿಳಿದಿತ್ತು!

ಎಚ್.ಆರ್. ದೇಸಾಯಿ, ರಾಯಚೂರು

*ಮಲಗಿದಾಗ ದೇವರಿಗೆ ಏನು ಕನಸುಗಳು ಬೀಳುತ್ತಿರುತ್ತವೆ?*

ಬೀಳಲು ಅವಕಾಶ ಕೊಟ್ಟರಲ್ಲವೇ? ಹಾಸಿಗೆ ಹಾಸಿಕೊಂಡು ಹೊದಿಕೆ ಬಿಡಿಸಿಕೊಳ್ಳುವಷ್ಟರಲ್ಲೇ ಎದ್ದೇಳು ದೇವದೇವ ಎಂಬ ಕಿವಿಗಡಚಿಕ್ಕುವ ಸದ್ದಿಗೆ ದೇವ ಬೆಚ್ಚಿ ಎದ್ದುಬಿಡುತ್ತಾನೆ.

ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ

*ಮೃದುವಾದ, ಮಧುರವಾದ, ಕೆಂಪನೆಯ ಆ ಹಣ್ಣಿಗೆ ಕಲ್ಲಂಗಡಿ ಅಂತ ಯಾಕೆ ಹೆಸರಿಟ್ಟರು ಗುರೂಜಿ?*

ಸರಿಯೇ! ಕಲ ಎಂದರೆ ಮಧುರ, ಅಂಗಡಿ ಎಂದರೆ ಆಡಂಬರ ಎಂದರೆ ತೋರಿಕೆ ಕಲ್ಲಂಗಡಿ ಎಂದರೆ ಮಧುರತೆಯ ಪ್ರದರ್ಶನ!

## ಬಹುಮಾನಿತ ಪ್ರಶ್ನೆ

ಮಂಜುಳ ಪ್ರಸನ್ನ, ಮೈಸೂರು

*ಅಂತರ್ಜಲ ಹೀಗೇ ಕೆಳಗಿಳಿಯುತ್ತಾ ಹೋದರೆ ಮುಂದೊಂದು ದಿನ ಪಾತಾಳವೇ ಗತಿ ಅಲ್ಲವೆ?*

ಜನಸಂಖ್ಯೆ, ಬೋರ್‌ವೆಲ್ ಕಡಿಮೆಯಿದ್ದಷ್ಟೂ ಜಗತ್ತು ನಗುತ್ತದೆ, ಇಲ್ಲದಿದ್ದರೆ ಕುಡಿಯಲೂ ಕಣ್ಣೀರೇ ಗತಿ!

ನಾಗರಾಜ್ ಪಾಂಡುರಂಗ ನಾಯ್ಕ, ಕಾರವಾರ

*ಸಾವಿಲ್ಲದವರ ಮನೆಯಿಂದ ಸಾಸಿವೆ ತರಲು ಸಾಧ್ಯವೆ?*

ಸಾಧ್ಯ; ನವವಿವಾಹಿತರು ಕಟ್ಟಿದ ನವಗೃಹದ ಗೃಹಪ್ರವೇಶದಂದೇ ಹೋಗಿ ತಂದುಬಿಡಿ.

ಕೆ.ಎಂ. ಲಿಂಗರಾಜು, ನಂಜನಗೂಡು

*ಪತಿಯೇ ಪರದೈವ; ಪತಿ ಪರರ ಪಾಲಾದರೆ?*

ಪರದೈವ (ಪರರತ್ತ ಡೈವ್ ಹೊಡೆಯುವವನು)!

ಎಸ್. ಶ್ರೀದರ್, ಬೆಂಗಳೂರು

*ಹಣವಿದ್ದಾಗ ದಾನ ಮಾಡಬಹುದು; ಹಣವಿಲ್ಲದಿದ್ದಾಗ?*

ಬರುವವರೆಗೂ ನಿಧಾನ ಮಾಡಬಹುದು!

ಎಂ.ಬಿ. ಕೃಷ್ಣಮೂರ್ತಿ, ಬೆಂಗಳೂರು

*ಬುದ್ಧಿವಂತರಿಗೂ, ಜಾಣರಿಗೂ ಏನು ವ್ಯತ್ಯಾಸ ಸಾರ್?*



ಬುದ್ಧಿವಂತ ಪಿ.ಎ ಆಗುತ್ತಾನೆ, ಜಾಣ ಬಾಸ್!

ರವಿ ಪೈ, ಹೊನ್ನಾವರ

*ಲವ್ ಎಂಬ ಶಬ್ದಕ್ಕಿರುವ ರೋಮಾಂಚನ ಬೇರೆ ಶಬ್ದಕ್ಕೇಕಿಲ್ಲ?*

ಏಕಿಲ್ಲ? ಲವರ್, ಲವ್ ಲೆಟರ್, ರೋಮಾನ್ಸ್, ಹನಿಮೂನ್, ಡೇಟಿಂಗ್........!

ಎಂ.ಬಿ. ರಂಗಪ್ಪಶೆಟ್ಟಿ, ಮೋಕ

*ಶ್ರವಣಕುಮಾರ ಕಾವಡಿಯಲ್ಲಿ ತನ್ನ ವೃದ್ಧ ಮಾತಾಪಿತೃಗಳನ್ನು ಹೊತ್ತು ತೀರ್ಥಯಾತ್ರೆ ಮಾಡಿಸಿದನಂತೆ. ಈಗಿನ ಮಕ್ಕಳು?*

ವೃದ್ಧಾಶ್ರಮದ ಚಾವಡಿಯಲ್ಲಿ ಬಿಟ್ಟು, ತೀರಿತು ತಮ್ಮ ಜವಾಬ್ದಾರಿ ಎನ್ನುತ್ತಾರೆ!

ರಾಮ್